**ಗೊತ್ತಾಗಿದ್ದು ಅವರ ಪುಸ್ತಕಕ್ಕೆ ಒಳ್ಳೆಯ ಪ್ರಚಾರ ಇದೆ. ಆಮೇಲೆ ಅದರ ಬಗ್ಗೆ ಚರ್ಚೆ ಕೂಡ ಆಗಿದೆ. ಹಂಗಾಗಿ ಮರುಮುದ್ರಣ ಆಗುತ್ತದೆ ಎಂದು. ಒಬ್ಬ ಕವಿ ಪ್ರಚಾರದಲ್ಲಿ ತೊಡಗಿಸಿಕೊಳ್ಳಬೇಕು ಎನ್ನುವ ಮಾತುಗಳು ಬರುತ್ತವೆಯಲ್ಲ ಇದು ನಮ್ಮ ಬರಹಗಾರರಿಗೆ ಎಷ್ಟರಮಟ್ಟಿಗೆ ಅಪಾಯಕಾರಿ ಎಂದು ಹೇಳುತ್ತೀರಾ?**

ಅಲ್ಲ, ಅದನ್ನ ಒಂದೇ ರೀತಿಯಾಗಿ ನೋಡಬೇಕಾಗಿಲ್ಲ. ನಾನೂ ಕವಿತೆಯ ಪ್ರಚಾರಕನೆ. ನನ್ನ ಪದ್ಯವನ್ನು ಸಿಕ್ಕಿದವರಿಗೆಲ್ಲ ಓದುತ್ತೇನೆ. ಮತ್ತು ಒಂದು ಒಳ್ಳೆಯ ಕವಿತೆ ಸಿಕ್ಕರೆ ನಾನು 12 ಜನರಿಗೆ ಓದುತ್ತೇನೆ. ಅವರಿಗೂ ಗೊತ್ತಿದೆ. ಇವರ ಹತ್ತಿರ ಇದೇ ಸಿಗೋದು ಅಂತ. ಆ ತರಹದ ಪ್ರಚಾರ ನಾವೆಲ್ಲ ಮಾಡಲೇಬೇಕು. ಮತ್ತು ಕವಿತೆ ಬಗ್ಗೆ ಆಸೆ ಇರೋನು ಅವನ ವ್ಯಕ್ತಿತ್ವದಿಂದಲೆ ಅದರ ಪ್ರಚಾರ ಮಾಡಬೇಕು. ಅದರ ಬಗ್ಗೆ ಇರುವ ತೀವ್ರವಾದ ಮೋಹ ಎದ್ದುಕಾಣಬೇಕು. ಕವಿತೆಯ ಅಮಲಿನಲ್ಲಿ ಇರುವವನನ್ನು ನೋಡಿದವರಿಗೆ ಇದರಲ್ಲೇನೋ ಸಂತೋಷ ಕೊಡೋ ಗುಣ ಇದೆ. ಇದರಲ್ಲೇನೋ ವಿವೇಕದ ಗುಣವೂ ಇದೆ ಎಂದು ಅನಿಸುತ್ತದೆ. ಒಂದು ವಿಚಿತ್ರವಾದ ಊಹೆಗೆ ನಿಲುಕದ ಗುಣವೂ ಇದೆ. ನಾವು ಒಂದು ಸಾರಿ ರುಚಿ ನೋಡಬೇಕಲ್ಲ ಎಂದು ಅನಿಸಬೇಕು. ಯಾಕೆಂದರೆ ಮನುಷ್ಯನನ್ನು ವ್ಯಾಮೋಹಗೊಳಿಸುವಂತಹ ವಿಷಯಗಳು ಬೇಕು. ಹಾಗೆ ಪ್ರಚಾರ ಅಂತ ತಗೊಂಡಾಗ ಈ ತರಹದ್ದು ಇದ್ದೇ ಇರುತ್ತದೆ. ನಾನು ಹೇಳುವುದೇನೆಂದರೆ, ಕವಿಗಳು ಕವಿತೆಗಳನ್ನ ಚೆನ್ನಾಗಿ ಓದಬೇಕು, ಎಲ್ಲ ಕಡೆ ಮಾತಾಡಬೇಕು, ಮತ್ತೆ ಕವಿತೆಯ ಸೋಂಕನ್ನು ಹಬ್ಬಿಸಬೇಕು. ನಮ್ಮ ಕಿ.ರಂ. ನಾಗರಾಜ ಹೇಳುತ್ತಿದ್ದರಲ್ಲ ಕವಿತೆಯ ಸೋಂಕು ಅಂತ – ಆ ತರಹದ ಪ್ರಚಾರ ಬೇಕು. ಉಳಿದ ಹಾಗೆ ಬೇರೆ ಬೇರೆ ತರಹದ ಈಗಿನ ಫೇಸ್‌ಬುಕ್ ಅಂತೆಲ್ಲ ಇದಾವಲ್ಲ, ಅದರಲ್ಲೆಲ್ಲ ನನಗೆ ನಂಬಿಕೆ ಇಲ್ಲ.

## ಅಬ್ದುಲ್ ರಶೀದ್

'ಹಾಲು ಕುಡಿದ ಹುಡುಗಾ', 'ಪ್ರಾಣಪಕ್ಷಿ' ಎಂಬ ವಿಶಿಷ್ಟ ಕಥಾಸಂಕಲನಗಳ ಮೂಲಕ ಗುರುತಿಸಿಕೊಂಡಿರುವ ರಶೀದ್ ಕವಿ, ಅಂಕಣಕಾರರು ಕೂಡ. 'ನರಕದ ಕೆನ್ನಾಲಿಗೆಯಂತ ನಿನ್ನ ಬೆನ್ನಹುರಿ' ಕವನ ಸಂಕಲನವಾದರೆ, 'ಮಾತಿಗೂ ಆಚೆ', 'ಅಲೆಮಾರಿಯ ದಿನಚರಿ', 'ಕಾಲುಚಕ್ರ, ಮೈಸೂರು ಪೋಸ್ಟ್' ಅವರ ಗದ್ಯಬರಹಗಳ ಪುಸ್ತಕಗಳಾಗಿವೆ. 'ಹೂವಿನ ಕೊಲ್ಲಿ' ಅವರ ಕಾದಂಬರಿ. ಮೈಸೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ಕೆಲಸ ಮಾಡುತ್ತಿರುವ ರಶೀದ್, ಕೊಡಗು ಜಿಲ್ಲೆಯ ಸುಂಟಿಕೊಪ್ಪದವರು.